ಅ) ಘಟಪ್ರಭಾ ಬಲದಂಡೆ ಕಾಲುವೆಯ ಕಿಮೀ. 0 ರಿಂದ 47, 49 ರಿಂದ 54ರ ವರೆಗೆ ಕೆಲಸಗಳು ಈಗಾಗಲೇ ಪೂರ್ಣಗೊಂಡಿವೆ. ಕಿಮೀ. 48, 55 ರಿಂದ 76, 78ರಿಂದ 95ರ ವರೆಗಿನ ಕೆಲಸಗಳ ಗುತ್ತಿಗೆಗಳನ್ನು ವಹಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಮಾರ್ಚ್ 98 ರವರೆಗೆ 11402ಹೆ ನೀರಾವರಿ ಕ್ಷೇತ್ರದ ಪ್ರಗತಿಯನ್ನು ಸಾಧಿಸಲಾಗಿದೆ. ಚಿಕ್ಕೋಡಿ ಶಾಖಾ ಕಾಲುವೆಯ ಕಿಮೀ. 37ರವರೆಗೆ, ಕಿಮೀ. 43,44,46ರಿಂದ 49 ಕಿಮೀ. ಕೆಲಸಗಳು ಪೂರ್ಣಗೊಂಡಿದ್ದು, ಕಿಮೀ.52ರ ವರೆಗಿನ ಬಾಕಿ ಕೆಲಸಗಳ ಗುತ್ತಿಗೆಗಳನ್ನು ವಹಿಸಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ. ಮಾರ್ಚ್ 98ರವರೆಗೆ 14841 ಹೆ.ನೀರಾವರಿ ಕ್ಷೇತ್ರದ ಪ್ರಗತಿಯನ್ನು ಸಾಧಿಸಲಾಗಿದೆ.

ಘಟಪ್ರಭಾ ಬಲದಂಡೆ ಕಾಲುವೆ, ಚಿಕ್ಕೋಡಿ ಶಾಖಾ ಕಾಲುವೆ ಹಾಗೂ ವಿತರಣಾ ಕಾಲುವೆಗಳ ಕೆಲಸಗಳಿಗೆ ಮಾರ್ಚ್ 98ರ ವರೆಗೆ ಒಟ್ಟು ರೂ. 189.74 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಇ) ಘಟಪ್ರಭಾ ಬಲದಂಡೆ ಕಾಲುವೆಯ ಕಿಮೀ.77ರ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ.

ಕಿಮೀ.96 ರಿಂದ 108ರವರೆಗೆ ಕಾಲುವೆಯ ಅಲೈನ್‌ಮೆಂಟ್‌ಗೆ ಮಂಜೂರಾತಿ ನೀಡಲಾಗಿದೆ.

ಕಿಮೀ.109 ರಿಂದ 122 ರವರೆಗೆ ಕಾಲುವೆಯ ಸರ್ವೆ ಸಮೀಕ್ಷೆಯು ಪೂರ್ಣಗೊಂಡಿದೆ.

ಕಿಮೀ. 122ರಿಂದ ಮುಂದೆ ಕಾಲುವೆಯ ಕಿಮೀ. 53 ರಿಂದ 55ರ ಕೆಲಸಗಳಿಗೆ ಟೆಂಡರ್‌ಕರೆಯಲಾಗಿದೆ.

ಕಿಮೀ. 56 ರಿಂದ 61ರವರೆಗೆ ಕಾಲುವೆಯ ಅಲೈನ್‌ಮೆಂಟ್‌ಗೆ ಅನುಮೋದನೆ ಹಂತದಲ್ಲಿದೆ.

ಈ) ಘಟಪ್ರಭಾ ಯೋಜನೆಯನ್ನು2000ನೇ ಇಸ್ವಿಯ ಒಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ಬೇಕಾಗುವ ಬಾಕಿ ಮೊತ್ತವು ರೂ. 482.19 ಕೋಟಿ ಆಗುವುದು. ಇದರ ಪೈಕಿ9899ನೇ ಸಾಲಿಗಾಗಿ ರೂ.61.00 ಕೋಟಿ ಅನುದಾನವನ್ನು ಒದಗಿಸಲಾಗಿದೆ.

ಘಟಪ್ರಭಾ ಬಲದಂಡೆ ಕಾಲುವೆಯ ಕಿಮೀ.133ರ ಮುಂದಿನ ಕಿಮೀ.ಗಳ ಸರ್ವೆ ಹಾಗೂ ಅನ್ವೇಷಣೆ ಕೆಲಸ ಕೈಗೊಳ್ಳಲು ಗದ್ದನಕೇರಿಯಲ್ಲಿ ಒಂದು ಹೊಸ ವಿಭಾಗವನ್ನು ಒದಗಿಸಿದ್ದು ಕಾರ್ಯ ನಿರ್ವಹಿಸುತ್ತಿದೆ.

ಘಟಪ್ರಭಾ ಮಲಪ್ರಭಾ (ಕಾಡಾ) ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಇಲಾಖೆಯ ಯೋಜನೆ.

1230 - ಶ್ರೀ ಚಂದ್ರಶೇಖರನಾಯಕ್ (ಗೋಕಾಕ್) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಘಟಪ್ರಭಾ ಮತ್ತು ಮಲಪ್ರಭಾ ಕಾಡಾ ಯೋಜನೆ ಅಡಿಯಲ್ಲಿ1994ರಿಂದ1998ರವರೆವಿಗೆ ಹಾಕಿಕೊಂಡಿರುವ ಯೋಜನೆಗಳು ಯಾವುವು?

2. *ಕಾಡಾ ಇಲಾಖೆಗೆ ಪ್ರತಿ ವರ್ಷ ಒದಗಿಸಲಾದ ಸಿಬ್ಬಂದಿ ವೇತನ ಮತ್ತು ಕಛೇರಿ ಕೆಲಸಗಳಿಗೆ ಒದಗಿಸಿದ ಹಣವೆಷ್ಟು?*

3. *ಸದರಿ ಇಲಾಖೆಯಿಂದ ಆಗಬೇಕಾದ ಕೆಲಸಗಳಿಗಿಂತ ಸಿಬ್ಬಂದಿ ವೇತನ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

4. *ಹಾಗಾದರೆ ಸದರಿ ಇಲಾಖೆಯನ್ನು ಮುಚ್ಚಿ ಇದರ ಖರ್ಚನ್ನು ನೀರಾವರಿ ಇಲಾಖೆಗೆ ಸೇರಿಸಲು ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಕೆ. ವೆಂಕಟೇಶ್ (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು) :

ಅ) ಕೇಂದ್ರ ವಲಯದ ಯೋಜನೆಗಳು

1) ಕಾಡಾ ಸಿಬ್ಬಂದಿ ವೆಚ್ಚ 2) ಜಮೀನು ನೀರಾವರಿ ಕಾಲುವೆಗಳು 3) ಸರ್ವೇ (ಟೊಪೋಗ್ರಾಫಿಕಲ್) ಸಾಯಿಲ್ ಇತ್ಯಾದಿ 4) ಬಸಿಗಾಲುವೆಗಳು 5) ವಾರಾಬಂದಿ 6) ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಿಗೆ ಸಬ್ಸಿಡಿ 7) ಬೆಳೆಗಳ ಪ್ರಾತ್ಯಕ್ಷತೆ 8) ಭೂ ಅಭಿವೃದ್ಧಿ ತರಬೇತಿ ಕೇಂದ್ರ 9) ಯೋಜನೆಗಳ ಅಭ್ಯಾಸ ಮತ್ತು ಸಂಶೋಧನೆ 10) ರೈತರ ಭಾಗವಹಿಸುವಿಕೆ 11) ಜವಳು ಭೂಮಿ ಕೃಷಿ ಯೋಗ್ಯ ಮಾಡುವಿಕೆ.

ರಾಜ್ಯ ವಲಯದ ಯೋಜನೆಗಳು

1) ಗೋದಾಮುಗಳ ನಿರ್ಮಾಣ 2) ಅಚ್ಚುಕಟ್ಟು ರಸ್ತೆಗಳು 3) ವಸತಿ ಸೌಲಭ್ಯ 4) ವಿಶೇಷ ಘಟಕ ಯೋಜನೆಗಳು 5) ಗಿರಿಜನ ಉಪಯೋಜನೆ 6) ಇಂಡೋಡಚ್ ಕಾರ್ಯಕ್ರಮ

2.

ವರ್ಷ	ಒದಗಿಸಲಾದ ಹಣ (ವಾಸ್ತವಿಕ ವೆಚ್ಚ)		
	ಸಿಬ್ಬಂದಿ ಮತ್ತು ವೇತನ (ರೂ.ಲಕ್ಷಗಳಲ್ಲಿ) (ಶೇ)	ಕಾಮಗಾರಿಗಳು (ರೂ. ಲಕ್ಷಗಳಲ್ಲಿ) (ಶೇ)	ಒಟ್ಟು (ರೂ.ಲಕ್ಷ ಗಳಲ್ಲಿ)
1994-95	59.90	166.01	225.91
1995-96	64.53	327.87	392.40
1996-97	67.68	424.14	491.82
1997-98	74.07	199.45	273.52
ಒಟ್ಟು	**266.18**	**1117.47**	**1383.65**
ಶೇಕಡವಾರು	19.23	80.77	

3. ಮೇಲೆ ತಿಳಿಸಿದಂತೆ ಸಿಬ್ಬಂದಿ ವೆಚ್ಚವು ಒಟ್ಟು ವೆಚ್ಚದ ಶೇಕಡಾ 19.23 ಮಾತ್ರ ಆಗಿರುತ್ತದೆ.

4. ಸಿಬ್ಬಂದಿ ವೆಚ್ಚವು ಒಟ್ಟು ಕಾಡಾ ವೆಚ್ಚದ ಶೇಕಡಾ 19.23 ಆಗಿರುವುದರಿಂದ ಕಾಡಾ ಇಲಾಖೆ ಮುಚ್ಚುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಹದಾಯಿ ಯೋಜನೆಯ ಕಾರ್ಯಗತ.

1231 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) :ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಾ ಸರ್ಕಾರದಿಂದ ಮಲಪ್ರಭಾ ನದಿಗೆ ಮಹದಾಯಿ ಯೋಜನೆಯ ಜೋಡಣೆ ಈಗ ಯಾವ ಹಂತದಲ್ಲಿದೆ?

ಆ) ಗೋವಾ ಸರ್ಕಾರ ಮಹದಾಯಿ ನೀರನ್ನು ಕೊಡಲು ಸಾಧ್ಯವಿಲ್ಲವೆಂದು ಪತ್ರಿಕಾ ಹೇಳಿಕೆ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) 1992ರಿಂದ ಇಲ್ಲಿಯವರೆಗೆ ಸುಮಾರು 6 ಸಲ ಮಾತುಕತೆ ನಡೆಸಿದರೂ ಪ್ರತಿಫಲ ದೊರೆಯದಿರುವುದಕ್ಕೆ ಕಾರಣವೇನು?

ಈ) ಕರ್ನಾಟಕದಲ್ಲಿಯೇ ಹರಿಯುವ ಹಳ್ಳಗಳಾದ ಕಳಸಾ, ಹಲ್ತಾರ ಮುಂತಾದವುಗಳಿಗೆ ಬಾಂದರ ಕಟ್ಟಿ ಮಲಪ್ರಭಾ ನದಿಗೆ 4 ಟಿಎಂಸಿ ನೀರನ್ನು ನಾವೆ ಒದಗಿಸಿಕೊಳ್ಳಲು ಏಕೆ ಯೋಜಿಸಬಾರದು?

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಮಂತ್ರಿಗಳು) :

ಅ) ಗೋವಾ ಸರ್ಕಾರದೊಡನೆ ಮಾತುಕತೆ ನಡೆಯುತ್ತಿದೆ.

ಆ) ಬಂದಿದೆ Yes.

ಇ) ಪ್ರತಿ ಸಭೆಗಳಲ್ಲಿ ಗೋವಾ ಸರ್ಕಾರವು ಪರಿಸರ ಅಸಮತೋಲನದ ಬಗ್ಗೆ ಆಕ್ಷೇಪಣೆ ಎತ್ತಿದ್ದರಿಂದ ಅಂತಿಮವಾಗಿ ಸದರಿ ವಿಷಯವನ್ನು ಅಧ್ಯಯನ ಮಾಡಲು ನೀರಿ, ನಾಗಪುರ ಇವರಿಗೆ ವಹಿಸಿ ಕೊಡಲಾಗಿದ್ದು, ಇವರಿಂದ ಅಂತಿಮ ವರದಿ ಮಾರ್ಚ್ 98ರಲ್ಲಿ ಬಂದಿದೆ. ವರದಿಯನ್ನು ಗೋವಾ ಸರ್ಕಾರಕ್ಕೆ ಕಳುಹಿಸಲಾಗಿದೆ. ದಿನಾಂಕ 25.4.98ರಂದು ನಡೆದ ಎರಡೂ ರಾಜ್ಯಗಳ ನೀರಾವರಿ ಸಚಿವರುಗಳ ಸಭೆಯಲ್ಲಿ ಈ ವರದಿಯನ್ನು ಗೋವಾ ಸರ್ಕಾರ ರಚಿಸಿರುವ ತಜ್ಞರ ಸಮಿತಿಯ ಮುಂದೆ ಮಂಡಿಸಿ 6 ತಿಂಗಳೊಳಗೆ ಸಮಿತಿಯ ವರದಿ ಪಡೆಯಲು ನಿರ್ಧರಿಸಲಾಯಿತು.

ಈ) ಇದನ್ನು ಪರಿಶೀಲಿಸಲಾಗುತ್ತಿದೆ. ಎರಡೂ ರಾಜ್ಯ ಸರ್ಕಾರಗಳು ತಾಂತ್ರಿಕ ಸಮಿತಿ ರಚಿಸಲು ಒಪ್ಪಿದ್ದು ಸಮಿತಿಯು ಇನ್ನು ಮೂರು ತಿಂಗಳೊಳಗಾಗಿ ವರದಿ ಸಲ್ಲಿಸುವುದು.